**ದಿನಾಂಕಃ 22.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ದಿಃ12-06-2000 ನೇ ಇಸವಿಯ ಪಂಚಾಯ್ತಿ ಪಾಲುಪಟ್ಟಿ ಹಾಜರುಪಡಿಸಿರುತ್ತೇನೆ(ಸದರಿ ದಾಖಲೆಗೆ ಡ್ಯೂಟಿ ಹಾಗೂ ಪೆನಾಲ್ಟಿಯನ್ನು ಪಾವತಿಸಿದ್ದು, ಸದರಿ ದಾಖಲೆಯನ್ನು ಪ್ರತಿವಾದಿಯರ ಆಕ್ಷೇಪಣೆಗೆ ಒಳಪಟ್ಟು ವಾದ ಮಂಡಿಸುವ ಸಮಯದಲ್ಲಿ ಅವರ ಹಕ್ಕನ್ನು ಕಾಯ್ದಿರಿಸಿ) ಸದರಿ ದಾಖಲೆಯನ್ನು **ನಿಪಿ-69** ಎಂದು ಗುರುತಿಸಲಾಯಿತು. ನನ್ನ ಹಾಗೂ ನನ್ನ ಸಹೋದರರ ನಡುವೆ ಆದ ವಿಭಾಗಕ್ಕೆ ಸಂಬಂಧಿಸಿದಂತೆ ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಾಗರಾಜು ಎಂಬುವವರು ಬರೆದಿರುತ್ತಾರೆ. ಸಾಕ್ಷಿದಾರರಾಗಿ ಸಿದ್ದಯ್ಯಗೌಡ , ರಾಜಣ್ಣ, ತಿಮ್ಮೇಗೌಡ, ರಾಜೇಗೌಡ, ಕರೀಗೌಡ, ರಾಮಸ್ವಾಮಿ ಮೊದಲಾದವರು ತಮ್ಮ ರುಜುಗಳನ್ನು ಮಾಡಿರುತ್ತಾರೆ. ಸದರಿ ದಾಖಲೆಗೆ ನನ್ನ ತಾಯಿಯಾದ ಬೋರಮ್ಮನವರು ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಸದರಿ ದಾಖಲೆಗೆ ನಾನೂ ಸಹ ಸಹಿ ಮಾಡಿರುತ್ತೇನೆ. ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ ಕಾರಣ ಅದನ್ನು ನಿಪಿ-69(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನನ್ನ ತಮ್ಮಂದಿರಾದ ಈ ದಾವೆಯ ಪ್ರತಿವಾದಿಯರೂ ಆದ ಬಲರಾಮೇಗೌಡ, ಕುಮಾರಸ್ವಾಮಿ, ಪುಟ್ಟರಾಜು, ಮಂಜೇಗೌಡ, ರಾಮಕೃಷ್ಣ ಇವರುಗಳೂ ಸಹ ರುಜು ಮಾಡಿರುತ್ತಾರೆ. ಸಾಕ್ಷಿ ಗುರುತಿಸುತ್ತಾರೆ. ಆದುದರಿಂದ ದಾವೆಯಲ್ಲಿ ಕೇಳಿದಂತೆ ಪರಿಹಾರ ಕೋರುತ್ತೇನೆ.

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

(ವಕೀಲರ ಕೋರಿಕೆ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ